ದಿನಾಂಕ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.M.M. ವಕೀಲರಿಂದ:**

ಈ ದಾವೆಯನ್ನು ರಾಜು ವಿರುದ್ಧ ಹಾಕಿರುತ್ತೇನೆ. ದಾವಾ ಸ್ವತ್ತಿನ ಖಾನೇಷುಮಾರಿ ನಂಬರ್ 82/123 ಆಗಿರುತ್ತದೆ. ಸದರಿ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 130 ಅಡಿ ಆಗಿರುತ್ತದೆ. ಸದರಿ ಒಂದೇ ಸ್ವತ್ತಿನ ಸಂಬಂಧ ದಾವೆ ಹಾಕಿರುತ್ತೀರಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ಒತ್ತುವರಿ ಮಾಡಿರುವ ಜಾಗವನ್ನು ಬಿಟ್ಟು ಕೊಡಿ ಎಂದು ದಾವೆಯನ್ನು ಹಾಕಿರುತ್ತೇನೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಮುಖ್ಯ ವಿಚಾರಣೆ ಪತ್ರದಲ್ಲಿ ಬರೆದಿರುವ ವಿಚಾರವನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಮುಖ್ಯ ವಿಚಾರಣೆ ಪತ್ರದಲ್ಲಿ ಪ್ರತಿವಾದಿ ತಿಮ್ಮಯ್ಯ ಎಂದು ಬರೆಸಿರುತ್ತೀರಿ ಎಂದರೆ ಸರಿ .

40*130 ಅಡಿ ಸ್ವತ್ತಿನ ಸಂಬಂಧ ದಾವೆಯನ್ನು ಹೂಡಿರುವ ಬಗ್ಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಒತ್ತುವರಿ ಆಗಿರುವ ಜಾಗದ ಬಗ್ಗೆ ಮಾತ್ರ ಬರೆಸಿರುವುದಾಗಿ ನುಡಿಯುತ್ತಾರೆ. ಈ ದಾವೆಯನ್ನು ಒತ್ತುವರಿ ಜಾಗಕ್ಕೆ ಮಾತ್ರ ಹಾಕಿರುತ್ತಿರೋ ಅಥವಾ ಪೂರಾ ಸ್ವತ್ತಿಗೆ ಸಂಬಂಧ ಹಾಕಿರುತ್ತಿರೋ ಎಂದರೆ ಸಾಕ್ಷಿದಾರರು ಒತ್ತುವರಿ ಜಾಗದ ಸಂಬಂಧ ಮಾತ್ರ ಹಾಕಿರುವುದಾಗಿ ನುಡಿಯುತ್ತಾರೆ. ಒತ್ತುವರಿ ಜಾಗದ ವಿಸ್ತೀರ್ಣ 130*2 ಅಡಿಯ ಸಂಬಂಧ ದಾವೆಯನ್ನು ಹಾಕಿರುವುದಾಗಿ ನುಡಿಯುತ್ತಾರೆ. ಸದರಿ

ಒತ್ತುವರಿ ಜಾಗದ ಚಕ್ಕುಬಂಧಿ ಪೂರ್ವಕ್ಕೆ ನಮ್ಮದೇ ಸ್ವತ್ತು , ಪಶ್ಚಿಮಕ್ಕೆ ಪ್ರತಿವಾದಿ ಸ್ವತ್ತು , ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. 130*2 ಅಡಿ ಒತ್ತುವರಿ ಮಾಡಿರುವ ಜಾಗದಲ್ಲಿ 45-50 ಅಡಿ ಮನೆಯನ್ನು ಪ್ರತಿವಾದಿ ಕಟ್ಟಿಕೊಂಡಿರುತ್ತಾರೆ . ಎಷ್ಟು ವಿಸ್ತೀರ್ಣ ದಲ್ಲಿ ಮನೆ ಕಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ , ಅಂದಾಜು 50 ಅಡಿ ನಮ್ಮ ಜಾಗದಲ್ಲಿ ಮನೆ ಕಟ್ಟಿರುವುದಾಗಿ ನುಡಿಯುತ್ತಾರೆ.

130*40 ಅಡಿ ಸ್ವತ್ತು ಯಾವ ರೀತಿ ನಿಮಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ತಂದೆಯವರು ಕ್ರಯಕ್ಕೆ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. 1963-64 ರಲ್ಲಿ ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ತಂದೆ ಒಂದೇ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಅದರ ಖಾನೇಷುಮಾರಿ ನಂಬರ್ 82*123 ಆಗಿರುತ್ತದೆ. ನಿಪಿ-3 ರ ಪ್ರಕಾರ ನಿಮ್ಮ ತಂದೆ ಎರಡು ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೂಲ ಕ್ರಯಪತ್ರವನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಇನ್ನೊಂದು ಪ್ರಕರಣದಲ್ಲಿ ದಾಖಲಿಸಿರುವುದಾಗಿ ನುಡಿಯುತ್ತಾರೆ. ಸದರಿ ಕ್ರಯ ಪತ್ರದಲ್ಲಿ ವಿಸ್ತೀರ್ಣ ನಮೂದು ಆಗಿರುವುದಿಲ್ಲ ಎಂದರೆ ಸರಿ.

130*40 ಅಡಿ ಯ ವಿಸ್ತೀರ್ಣ ವನ್ನು ಯಾವ ಆಧಾರದ ಮೇಲೆ ಹೇಳಿರುತ್ತೀರಿ ಎಂದರೆ ಸಾಕ್ಷಿದಾರರು ನಾನೇ ಅಳತೆ ಮಾಡಿ ಹೇಳುತ್ತಿರುವುದಾಗಿ ನುಡಿಯುತ್ತಾರೆ. 130*40 ಕ್ಕೆ ಸಂಬಂಧಪಟ್ಟಂತೆ ನೀವು ಮಾಲೀಕರು ಎನ್ನುವ ಸಂಬಂಧ ದಾಖಲೆಯನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿಗೆ ದಾವಾ ಸ್ವತ್ತಿನ ಅಳತೆ ಸಂಬಂಧ ಯಾವುದೇ ಅರ್ಜಿ ನೀಡಿರುವುದಿಲ್ಲ. ಪ್ರತಿವಾದಿ ಸಹ ಅಳತೆಗೆ ಅರ್ಜಿ ಸಲ್ಲಿಸಿದ್ದು , ನೀವು ಈ ದಾವೆ ಚಾಲ್ತಿಯಲ್ಲಿರುವ ಸಂಬಂಧ ಅದನ್ನು ತಡೆದಿರುತ್ತೀರಿ ಎಂದರೆ ಸರಿ.

O.S. 502/2016 ರಡಿಯಲ್ಲಿ ನೀವು ಪ್ರತಿವಾದಿ ತಂದೆ ವಿರುದ್ಧ ದಾವಾ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿದಾರರು ಅವರು ಜೀವಂತ ಇದ್ದಾಗ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಪ್ರತಿವಾದಿ ತಂದೆ ತೀರಿಕೊಂಡ ಮೇಲೆ ಪ್ರತಿವಾದಿಗಳನ್ನು ಆ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸರಿ . ಅದರಲ್ಲಿ ಈ ದಾವೆಯ ಪ್ರತಿವಾದಿಯನ್ನು, ಪ್ರತಿವಾದಿ 1(a) ಯನ್ನಾಗಿ ತೋರಿಸಿರುತ್ತೀರಿ ಎಂದರೆ ಸರಿ . ಆ ದಾವೆಯಲ್ಲೂ ಸಹ ಇದೇ ಖಾನೇಷುಮಾರಿ ನಂಬರ್ ಇತ್ತು ಎಂದರೆ ಸರಿ .

ಆ ದಾವೆಯಲ್ಲಿ ಖಾನೇಷುಮಾರಿ ನಂಬರ್ 82/123 ರ ಪೂರ್ ಪಶ್ಚಿಮ 37 ವರೆ ಅಡಿ , ಉತ್ತರ ದಕ್ಷಿಣ 69 ಅಡಿ ರ ಸಂಬಂಧ ಸದರಿ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿ . ಸದರಿ ದಾವೆಯಲ್ಲಿ ದಾವಾ ಸ್ವತ್ತು 18.01.1961ರ ಕ್ರಯ ಪತ್ರ ದ ಮುಖಾಂತರ ನಮ್ಮ ತಂದೆಗೆ ಬಂದಿತ್ತು ಎಂದು ಹೇಳಿರುತ್ತೀರಿ ಎಂದರೆ ಸರಿ . ಸದರಿ ದಾವೆ ಈಗಲೂ ಸಹ 3 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ದೆ ಎಂದರೆ ಸರಿ . ಎರಡೂ ದಾವೆಯನ್ನು ಒಬ್ಬರೇ ವಕೀಲರು ನಡೆಸುತ್ತಿದ್ದಾರೆ ಎಂದರೆ ಸರಿ .

O.S. 502/2016ರಲ್ಲಿರುವ ಸ್ವತ್ತಿನ ಶೆಡ್ಯೂಲ್ 7 ಅಂಕಣ ಹೆಂಚಿನ ಮನೆ ಮತ್ತು ಹಿತ್ತಲು ಎಂದು ಬರೆಸಿರುತ್ತೀರಿ ಎಂದರೆ ಸರಿ . ಈ ದಾವೆಯ ಶೆಡ್ಯೂಲ್ ನಲ್ಲಿ ಶೀಟ್ ಮನೆ ಎಂದು ತೋರಿಸಿರುತ್ತೀರಿ ಎಂದರೆ ಸರಿ . ಈ ದಾವೆಯಲ್ಲಿ ಹಿತ್ತಲು ಎಂದು ತೋರಿಸಿರುವುದಿಲ್ಲ ಎಂದರೆ ಸರಿ . ಈ ದಾವೆಯ ವಿಸ್ತೀರ್ಣ ಪೂರ್ವ ಪಶ್ಚಿಮ 39 ಅಡಿ , ಉತ್ತರ ದಕ್ಷಿಣ 130 ಅಡಿ ಗೆ ಈ ದಾವೆ ಹಾಕಿರುವುದಾಗಿ ಪತ್ರದಲ್ಲಿ ಬರೆಸಿರುತ್ತೀರಿ ಎಂದರೆ ಸರಿ . ನಿಪಿ-4 ಅನ್ನು ನೀವಾಗಲೀ , ನಿಮ್ಮ ತಂದೆಯಾಗಲೀ ಯಾವ ಆಧಾರದ ಹಾಜರುಪಡಿಸಿರುತ್ತೀರಿ ಎಂದು ಮ್ಯೂಟೇಷನ್ ಪಂಚಾಯಿತಿಯಲ್ಲಿ ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ಅನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಯಾವುದೇ ಸ್ವತ್ತಿನ ಅಳತೆ ಇಲ್ಲ

ಎಂದರೆ ಸರಿಯಲ್ಲ. ನಿಪಿ-5 ರಲ್ಲೂ ಸಹ ಅಳತೆ ಇರುವುದಿಲ್ಲ ಎಂದರೆ ಸರಿ . 40*130 ಅಡಿಗೆ ನಮ್ಮ ತಂದೆಯವರು ಹಕ್ಕುದಾದರು ಎನ್ನುವ ಸಂಬಂಧ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ ಎಂದರೆ ಸರಿ .

O.S. 502/2016 ಅನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನೀವೇ ಕೊಟ್ಟಿರುತ್ತೀರಿ ಎಂದರೆ ಸರಿ . ಇಲ್ಲಿ ನೀಡಿರುವ ದಾಖಲೆಯನು O.S. 502/2016 ರಲ್ಲಿ ನೀಡಿರುತ್ತೀರಿ ಎಂದರೆ ಸರಿ . O.S. 502/2016 ಸಹ ಹಕ್ಕಿನ ದಾವೆ ಆಗಿರುತ್ತದೆ ಎಂದರೆ ಸರಿ . ಸದರಿ ದಾವೆಯಲ್ಲಿ ಕೇಳಿರುವ ಪರಿಹಾರವನ್ನು O.S. 502/2016 ರಲ್ಲಿ ಕೇಳಲು ಅಡ್ಡಿ ಇರಲಿಲ್ಲ ಎಂದರೆ ಆಗ ಮನೆಯನ್ನು ಕಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿ ನ್ಯಾಯಾಲಯದ ಸಮಯ ಹಾಳು ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನೀವು ಸದರಿ ಸ್ವತ್ತಿನ ಸಂಬಂಧ ಈಗಾಗಲೇ O.S. 502/2016 ರನ್ನು ದಾಖಲಿಸಿದ್ದೇನೆ ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿದಾರರು ಬರೆಸಿಲ್ಲ ಎಂದು ನುಡಿಯುತ್ತಾರೆ. ನೀವು ಹೂಡಿರುವ ದಾವಾ ಸ್ವತ್ತನ್ನು ಊಹೆ ಮಾಡಿಕೊಂಡು ಬರೆಸಿರುತ್ತೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ